# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 100/2024

**ಸಾಕ್ಷಿಯನ್ನು ದಿಃ 30.06.2025 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಸರಿತಾ | ಸಿಡಬ್ಲ್ಯೂಃ 2 | ಪಿಡಬ್ಲ್ಯೂಃ 1 |
| ಗಂಡನ ಹೆಸರು | ಗೋವಿಂದರಾಜು | | |
| ವಯಸ್ಸು | 40 ವರ್ಷ | | |
| ಕೆಲಸ | ಗೃಹಿಣಿ | | |
| ವಾಸಸ್ಥಳ | ಕಲ್ಕುಣಿಕೆ ಹುಣಸೂರು | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ಚಾಸಾ–1 ಗೊತ್ತು. ಚಾಸಾ–3 ರಿಂದ 6 ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ಈ ಪ್ರಕರಣದಲ್ಲಿ ಪೋಲಿಸ್ ಠಾಣೆಗೆ ಹೋಗಿ ಹೇಳಿಕೆ ಕೊಟ್ಟಿದ್ದೇನೆ. ದಿಃ 12.12.2023 ರಂದು ಬೆಳಿಗ್ಗೆ 6–30 ಗಂಟೆಗೆ ನಾನು ನಮ್ಮ ಮನೆಯ ಬಳಿ ಇರುವಾಗ ಚಾಸಾ–1 ರವರ ಮನೆಯಲ್ಲಿ ಜೋರಾಗಿ ಕಿರುಚಾಡುವುದು ಕೇಳಿಬಂತು. ನಾನು ಚಾಸಾ–3 ರವರ ಜೊತೆ ಹೋಗಿ ನೋಡಿದಾಗ 1ನೇ ಆರೋಪಿಯು ಚಾಸಾ–1 ರವರಿಗೆ ಲೋಫರ್ ಮುಂಡೆ ಎಂದು ಹೊಲಸು ಮಾತುಗಳಿಂದ ಬೈದರು. 1ನೇ ಆರೋಪಿಯು ಚಾಸಾ–1 ರವರ ಕತ್ತು ಹಿಡಿದುಕೊಂಡು ಅವರ ಮಾಂಗಲ್ಯ ಚೈನನ್ನು ಕಿತ್ತು ಹಾಕಿದರು. 1ನೇ ಆರೋಪಿಯು ಚಾಸಾ–1 ರವರ ಜುಟ್ಟನ್ನು ಹಿಡಿದುಕೊಂಡು ಬೀದಿಯಲ್ಲಿ ಎಳೆದುಕೊಂಡು ಬಂದರು. 1ನೇ ಆರೋಪಿಯು ಚಾಸಾ–1 ರವರ ಎಡಪಕ್ಕೆಗೆ ಹೊಡೆದರು. 2ನೇ ಆರೋಪಿಯು ಚಾಸಾ–1 ರವರ ಕೈಗಳನ್ನು ಹಿಡಿದುಕೊಂಡು ನಿನ್ನನ್ನು ಸಾಯಿಸುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿದರು. ಚಾಸಾ–1 ರವರ ಮಗವನ್ನು ಕೂಡ ವಿಷ ಹಾಕಿ ಸಾಯಿಸುತ್ತೇನೆ ಎಂದು ಬೆದರಿಕೆ ಹಾಕಿದರು. ನಾನು ಮತ್ತು ಚಾಸಾ–3 ರವರು ಜಗಳವನ್ನು ಬಿಡಿಸಿದೆವು. ಚಾಸಾ–3 ರವರು ಚಾಸಾ–1 ರವರನ್ನು ಬೈಕಿನಲ್ಲಿ ಹುಣಸೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಚಾಸಾ–1 ರವರು ಈ ಬಗ್ಗೆ ದೂರು ಕೊಟ್ಟ ಬಗ್ಗೆ ನನಗೆ ಗೊತ್ತಾಯಿತು. ಚಾಸಾ–1 ರವರ ಬಳಿ ಯಾಕೆ ಗಲಾಟೆಯಾಯಿತು ಎಂದು

ವಿಚಾರಿಸಿದಾಗ ನೀರು ಹಿಡಿದುಕೊಳ್ಳುವ ವಿಚಾರದಲ್ಲಿ ಗಲಾಟೆಯಾಯಿತು ಎಂದು ಹೇಳಿದರು. ಈ ಹೇಳಿಕೆಯನ್ನು ನಾನು ಪೊಲಿಸರ ಮುಂದೆ ಜಗಳವಾದ 6 ದಿನದ ನಂತರ ಹೇಳಿಕೆ ನೀಡಿದ್ದೇನೆ. ಆ ದಿನ ಚಾಸಾ-1 ರವರಿಗೆ ಹಲ್ಲೆ ಮಾಡಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಸ್.ಪಿ ವಕೀಲರಿಂದಃ**

ಚಾಸಾ-1 ಮತ್ತು ನನ್ನ ತಾಯಿ ಅಕ್ಕ ತಂಗಿಯರು ಎಂದರೆ ಸರಿ. ಚಾಸಾ-1 ಮೂಲತಃ ಹೆಚ್.ಡಿ ಕೋಟೆ ತಾಲ್ಲೂಕಿನವರು ಎಂದರೆ ಸರಿ. ಚಾಸಾ-1ರವರ ಮದುವೆ ಎಷ್ಟನೇ ಇಸವಿಯಲ್ಲಿ ಆಗಿದೆ ಎಂದು ಗೊತ್ತಿಲ್ಲ. ನಾನು ಈ ದಿನ ಚಾಸಾ-1 ರವರ ತಂದೆಯ ಜೊತೆ ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದರೆ ಸರಿ. ನಮ್ಮ ಮತ್ತು 1ನೇ ಆರೋಪಿ ಯ ಮನೆ ನಡುವೆ ಸುಮಾರು 30-40 ಮನೆಗಳು ಇವೆ . ನನ್ನ ಮನೆ ಬೇರೆ ಬೀದಿಯಲ್ಲಿ ಇದೆ ಎಂದರೆ ಸರಿ. 1ನೇ ಆರೋಪಿ ಯ ಮನೆಯ ಅಕ್ಕ-ಪಕ್ಕ ಬೇರೆ ವಾಸದ ಮನೆಗಳು ಇವೆ ಎಂದರೆ ಸರಿ. ಆರೋಪಿತರ ಮನೆಯಲ್ಲಿ ಆರೋಪಿತರು, 1ನೇ ಆರೋಪಿಯ ತಂದೆ ತಾಯಿ ಮತ್ತು ಚಾಸಾ-1 ರವರ ಗಂಡ ವಾಸ ಇದ್ದಾರೆ. ಸದರಿ ಮನೆ 1ನೇ ಆರೋಪಿಯ ತಾಯಿಯಾದ ಸೌಭಾಗ್ಯ ಲಕ್ಷ್ಮೀ ರವರ ಹೆಸರಿನಲ್ಲಿ ಇದೆ ಎಂದರೆ ಸರಿ. ಮನೆಯಲ್ಲಿ ಹಲವಾರು ಭಾರಿ ಮನಸ್ತಾಪ ಉಂಟಾಗಿ ಚಾಸಾ-1 ರವರು ತಂದೆಯ ಮನೆಯಲ್ಲಿ ಹೋಗಿ ವಾಸ ಮಾಡುತ್ತಿದ್ದರು ಎಂದರೆ ಸರಿ. ಚಾಸಾ-1 ರವರು ತೀರಿಕೊಳ್ಳುವ 2 ವರ್ಷಗಳ ಹಿಂದಿನಿಂದಲೂ H.D ಕೋಟೆಯಲ್ಲಿರುವ ತನ್ನ ತಂದೆಯ ಮನೆಯಲ್ಲಿಯೇ ವಾಸವಿದ್ದರು ಎಂದರೆ ಸರಿ. ಚಾಸಾ-1 ರವರು ತೀರಿಹೋಗಿ ಸುಮಾರು 9 ತಿಂಗಳು ಆಗಿದೆ. ಚಾಸಾ-1 ರವರ ಮರಣಾನಂತರ ಸದರಿ ಮನೆ ಚಾಸಾ-1 ರವರ ಅಥವಾ ಅವರ ಮಗುವಿನ ಹೆಸರಿಗೆ ಮಾಡಿಕೊಡುವ ಮಾತು-ಕತೆ ಆಗಿದೆ ಎಂದರೆ ಸರಿ.

ಚಾಸಾ-1 ರವರು ಇಲ್ಲಿ ವಾಸವಿದ್ದಾಗ ಮನೆ ಅವರ ಹೆಸರಿಗೆ ಮಾಡಿಕೊಡುವ ಮಾತು-ಕತೆ ಆಗುತ್ತಿತ್ತು ಎಂದರೆ ಇಲ್ಲ. ಗಲಾಟೆಯಾಯಿತು ಎನ್ನುವ ಸಮಯದಲ್ಲಿ ಚಾಸಾ-1 ರವರ ಮನೆಯವರು ಹಾಗೂ ಅಕ್ಕ-ಪಕ್ಕದ ಮನೆಯವರು ಮನೆಯಲ್ಲಿದ್ದರು.

ನಾನು ಹೋಗುವಷ್ಟರಲ್ಲಿ ಸ್ಥಳದಲ್ಲಿ ಸುಮಾರು ಜನ ಸೇರಿದ್ದರು ಎಂದರೆ ಸರಿ. ಗಲಾಟೆಯ ಸಮಯದಲ್ಲಿ ಸುಮಾರು 10 ರಿಂದ 15 ಜನ ಇದ್ದಿರಬಹುದು. ನಾನು ಹೋಗುವಾಗ ಅವರು ಹೊಡೆದಾಡಿಕೊಳ್ಳುತ್ತಿದ್ದರು. ಅಕ್ಕ-ಪಕ್ಕದವರು ಗಲಾಟೆಯನ್ನು ಬಿಡಿಸಲು ಪ್ರಯತ್ನಿಸಲಿಲ್ಲ. ಆ ದಿನ ಆರೋಪಿತರು ಹಾಗೂ ಚಾಸಾ− 1 ರವರ ಮಧ್ಯೆ ಯಾವುದೇ ಗಲಾಟೆಯಾಗಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಚಾಸಾ−1 ರವರಿಗೆ ಅವಾಚ್ಯಶಬ್ದಗಳಿಂದ ಬೈದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ−1 ರವರ ಎಡಪಕ್ಕೆಗೆ ಒದ್ದರು ಎಂದು ನಾನು ಹೇಳಿಲ್ಲ ಎಂದರೆ ಹೇಳಿದ್ದೇನೆ. ಚಾಸಾ−1 ರವರ ಮಗುವನ್ನು ವಿಷ ಹಾಕಿ ಸಾಯಿಸುವುದಾಗಿ ಆರೋಪಿತರು ಹೇಳಿರುತ್ತಾರೆ ಎಂದು ನಾನು ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಆರೋಪಿ ತರು ಚಾಸಾ−1 ರವರ ಎಡಪಕ್ಕೆಗೆ ಒದ್ದರು ಮತ್ತು ಮಗವನ್ನು ವಿಷಹಾಕಿ ಸಾಯಿಸುವುದಾಗಿ ಹೇಳಿದರು ಎಂದು ಇದೇ ಮೊದಲ ಭಾರಿಗೆ ಹೇಳುತ್ತಿದ್ದೇನೆಯೇ ಹೊರತು ಬೇರೆ ಎಲ್ಲಿಯೂ ಹೇಳಿಲ್ಲ ಎಂದರೆ ಸರಿಯಲ್ಲ.

ಗಲಾಟೆ ಆಯಿತು ಎನ್ನುವ ಸಮಯದಲ್ಲಿ ನಾನು ಸುಮಾರು ಒಂದು ಗಂಟೆ ಅಲ್ಲಿದ್ದೆ. ದೂರು ಕೊಟ್ಟ ಬಗ್ಗೆ ಚಾಸಾ−1 ರವರು ಜಗಳವಾದ 6 ದಿವಸಕ್ಕೆ ನನಗೆ ಹೇಳಿದರು. ಚಾಸಾ−1 ರವರು ಆಸ್ಪತ್ರೆಯಿಂದ ಎಷ್ಟು ಹೊತ್ತಿಗೆ ವಾಪಸ್ಸು ಬಂದರು ಎಂದು ನನಗೆ ಗೊತ್ತಿಲ್ಲ. ಯಾವಾಗ ಬಂದರು ಎಂದು ಗೊತ್ತಿಲ್ಲ. ಚಾಸಾ−1 ರವರ ತಾಯಿ ಸೌಭಾಗ್ಯ ಲಕ್ಷ್ಮೀ ನನ್ನ ಜೊತೆಗೆ ಹೆಚ್ಚಾಗಿ ಮಾತನಾಡುತ್ತಿರಲಿಲ್ಲ. ಸಬಭಾಗ್ಯ ಲಕ್ಷ್ಮೀ ನನಗೆ ಸಂಬಂಧಿ ಎಂದರೆ ಚಿಕ್ಕಮ್ಮನಾಗಬೇಕು. ಗಲಾಟೆಯಗಿದೆ ಎನ್ನುವ ನಂತರ ನಿಮ್ಮ ಚಿಕ್ಕಮ್ಮನಾದ ಸೌಭಾಗ್ಯ ಲಕ್ಷ್ಮೀರವರನ್ನು ವಿಚಾರಿಸಿದ್ದೀರಾ ಎಂದರೆ ಇಲ್ಲ. ದಿಃ 12.12.2023 ರಂದು ನಾನು ಹೇಳುವಂತಹ ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ. ಗಲಾಟೆಯಲ್ಲಿ ಚಾಸಾ−1 ರವರ ಮಾಂಗಲ್ಯ ಚೈನನ್ನು 1ನೇ ಆರೋಪಿ ಕಿತ್ತು ಹಾಕಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸೌಭಾಗ್ಯ ಲಕ್ಷ್ಮೀ ರವರ ಹೆಸರಿನಲ್ಲಿರುವ ಮನೆಯನ್ನು ಚಾಸಾ−1 ರವರು ತನ್ನ ಹೆಸರಿಗೆ ಬರೆದುಕೊಡುವಂತೆ ಹೇಳಿ ಗಲಾಟೆ ಮಾಡುತ್ತಿದ್ದು, ಆ ಕಾರಣದಿಂದ ಸುಳ್ಳು ದೂರನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ಸೌಭಾಗ್ಯ ಲಕ್ಷ್ಮೀ ರವರು ತಮ್ಮ ಇಬ್ಬರು ಗಂಡು ಮಕ್ಕಳಿಗೂ ಕೂಡ ಮನೆ ಕೊಡಬೇಕೆಂದು ಹೇಳುತ್ತಿದ್ದರು ಎಂದರೆ ಸರಿ. ನನ್ನ ಜೊತೆ

ಬಂದಿರುವ ಚಾಸಾ−1 ರವರ ತಂದೆಯ ಮಾತುಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ−1 ರವರ ಹೆಸರಿಗೆ ಮಾತ್ರ ಮನೆ ಬರೆಯಿಸಿಕೊಳ್ಳಲು 1ನೇ ಆರೋಪಿ ಬಿಡುತ್ತಿರಲಿಲ್ಲ ಎಂಬ ವಿಷಯ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ಚಾಸಾ−1 ರವರು ಆರೋಪಿತರ ವಿರುದ್ಧ ಸುಳ್ಳು ದೂರನ್ನು ನೀಡಿರುವ ವಿಷಯ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಚಾಸಾ−1 ರವರು ನನ್ನ ಅಕ್ಕನ ಮಗಳಾದ ಕಾರಣ ಅವರಿಗೆ ಸಹಾಯ ಮಾಡಬೇಕೆಂದು ಯಾವುದೇ ಘಟನೆ ನಡೆಯದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.